ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) :

ಅ) ಹೌದು, ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿನ ಅಮರಾವತಿ ಗ್ರಾಮದಲ್ಲಿ ಟ್ರಕ್ ಟರ್ಮಿನಲ್ ನಿರ್ಮಿಸುವುದು ಅವಶ್ಯವೆಂದು ಮನಗಂಡು, ಟ್ರಕ್ ಟರ್ಮಿನಲ್ ಸ್ಥಾಪನೆಗೆ ಹಣ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿನ ಅಮರಾವತಿ ಗ್ರಾಮದಲ್ಲಿ ಟ್ರಕ್ ಟರ್ಮಿನಲ್ ನಿರ್ಮಾಣಕ್ಕಾಗಿ ಒಟ್ಟು 37-82 ಎಕರೆ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಮೂಲಕ ಭೂಸ್ವಾಧೀನ ಪಡಿಸಿ ಕೊಳ್ಳಲು ಕ್ರಮ ಜಾರಿಯಲ್ಲಿದ್ದು ಕಲಂ 28(4) ರಡಿ ಅಂತಿಮ ಅಧಿಸೂಚನೆ ಹೊರಡಿಸುವ ಹಂತದಲ್ಲಿದೆ.

ಇ) ಸರ್ಕಾರವು ಸದರಿ ಜಮೀನ್ನು ಖರೀದಿಸಲು 2.50 ಕೋಟಿ ರೂ.ಗಳನ್ನು ಮಂಜೂರು ಮಾಡಿದೆ. ಈಗಾಗಲೇ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಮುಂಗಡವಾಗಿ 99.74 ಲಕ್ಷ ರೂ.ಗಳನ್ನು ಪಾವತಿಸಿದೆ. ಮುಂದುವರಿದು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಸದರಿ ಜಮೀನುಗಳನ್ನು ಭೂಸ್ವಾಧೀನಪಡಿಸಿ, ಕಂಪನಿಗೆ ಹಸ್ತಾಂತರಿಸಿದ ಕೂಡಲೇ ಟ್ರಕ್ ಟರ್ಮಿನಲ್ ನಿರ್ಮಿಸಲು ಕ್ರಮಕೈಗೊಳ್ಳ ಲಾಗುವುದು.

ವಸತಿ ಶಾಲೆಯ ನಿರ್ಮಾಣ

372 (87) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ (ಮಡಿಕೇರಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆ, ಸೋಮವಾರ ಪೇಟೆ ತಾಲ್ಲೂಕಿನ ಬಸವನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡ ಕಾಮಗಾರಿ ಅರ್ಧದಲ್ಲಿ ನಿಂತು ಹೋಗಲು ಕಾರಣವೇನು;

ಆ) ಈ ಕಾಮಗಾರಿಗೆ ಸರ್ಕಾರದಿಂದ ಎಷ್ಟು ಹಣ ಮಂಜೂರಾಗಿದೆ;

ಇ) ಕಾಮಗಾರಿಯನ್ನು ಪೂರ್ಣಗೊಳಿಸಲು ಕೈಗೊಂಡಿರುವ ಕ್ರಮಗಳೇನು? ಯಾವ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಡಿ. ಸುಧಾಕರ (ಸಮಾಜ ಕಲ್ಯಾಣ ಸಚಿವರು) :

ಅ) ಬಸವನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಶಿಕ್ಷಣ ಇಲಾಖೆಯಿಂದ ಪ್ರಾರಂಭಿಸಿದ್ದು, ಗಂಡು ಮಕ್ಕಳ ವಸತಿ ಗೃಹ, ಹೆಣ್ಣು ಮಕ್ಕಳ ವಸತಿ ಗೃಹ, ಅಡುಗೆ ಮನೆ ಮತ್ತು ಭೋಜನಾ ಶಾಲೆಯ (3) ಕಟ್ಟಡಗಳ ನಿರ್ಮಾಣಕ್ಕೆ ರೂ.88.90 ಲಕ್ಷಗಳ ಅಂದಾಜು ವೆಚ್ಚಕ್ಕೆ ಶಿಕ್ಷಣ ಇಲಾಖೆಯು 2000–01ನೇ ಸಾಲಿನಲ್ಲಿ ಅನುಮೋದನೆ ನೀಡಿದ್ದು, ರೂ.50.80 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿತ್ತು. ಸದರಿ ಕಾಮಗಾರಿಯನ್ನು ಅಂದಿನ ಕರ್ನಾಟಕ ಭೂಸೇನಾ ನಿಗಮ ನಿಯಮಿತ (ಈಗಿನ ಕರ್ನಾಟಕ ರೂರಲ್ ಇನ್ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್) ಸಂಸ್ಥೆಗೆ ವಹಿಸಿತ್ತು. ಕರ್ನಾಟಕ ಭೂಸೇನಾ ನಿಗಮ ನಿಯಮಿತವು ಈ ಕಾಮಗಾರಿಯ ಅಂದಾಜು ವೆಚ್ಚಕ್ಕೆ ಪೂರ್ಣವಾಗಿ ಅನುದಾನ ಬಿಡುಗಡೆ ಆಗದೇ ಇರುವುದರಿಂದ ಕಾಮಗಾರಿ ಯನ್ನು ಸ್ಥಗಿತಗೊಳಿಸಲಾಗಿತ್ತು.

ಆ) ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ಶಿಕ್ಷಣ ಇಲಾಖೆಯಿಂದ ಬಿಡುಗಡೆಯಾದ ಒಟ್ಟಾರೆ ಅನುದಾನದಲ್ಲಿ ವೆಚ್ಚ ಭರಿಸಲಾಗುವುದು.

ಇ) ಮೇಲೆ ಹೇಳಿದ ವಸತಿ ಶಾಲೆಯನ್ನು 2003–04ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧೀನದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನಕ್ಕೆ ಒಳಪಡಿಸಲಾಯಿತು. ಕರ್ನಾಟಕ ಭೂಸೇನಾ ನಿಗಮ ನಿಯಮಿತವು ಬಾಕಿ ಉಳಿದ ಕಾಮಗಾರಿಯನ್ನು ಪೂರ್ಣ ಗೊಳಿಸಲು ಅಂದಾಜು ಪಟ್ಟಿಯನ್ನು ಪರಿಷ್ಕರಿಸಿ, ಪರಿಷ್ಕೃತ ಅಂದಾಜು ರೂ.44.90 ಲಕ್ಷಗಳಿಗೆ ದಿನಾಂಕ: 27–01–2009 ರಂದು ಅನುಮೋದನೆ ನೀಡಿದೆ.

ಕರ್ನಾಟಕ ಭೂಸೇನಾ ನಿಗಮ ನಿಯಮಿತವು ಅಡುಗೆ ಮನೆ, ಭೋಜನಾ ಶಾಲಾ ಕಟ್ಟಡ, ಗಂಡು ಮತ್ತು ಹೆಣ್ಣು ಮಕ್ಕಳ ವಸತಿ ನಿಲಯಗಳ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸಿ ದಿನಾಂಕ: 24–02–2010 ರಂದು ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಬಿಟ್ಟುಕೊಟ್ಟಿದೆ. ಅಂತಿಮ ಬಿಲ್ಲುಗಳು ಪಾವತಿ ಮಾಡಲು ಬಾಕಿ ಇವೆ.